ದಿನಾಂಕಃ 11.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ: ಮಾನ್ಯ ಶ್ರೀ ಹೆಚ್ ಎಂ ವಕೀಲರಿಂದಃ**

ವಾದಿಯವರು ನನ್ನ ಸೋದರತ್ತೆಯ ಮಗಳು ಮತ್ತು ನಮ್ಮ ಪಕ್ಕದ ಗ್ರಾಮದವರಾಗಿರುತ್ತಾರೆ. ವಾದಿಯವರು ಈ ದಾವೆಯನ್ನು 38 ಗುಂಟೆ ಜಮೀನಿಗಾಗಿ ದಾಖಲು ಮಾಡಿರುತ್ತಾರೆ. ಅದರ ಸ.ನಂ 24 ಸಿ ಆಗಿರುತ್ತದೆ. ಎ ಶೆಡ್ಯೂಲ್ ಆಸ್ತಿಯ ಚೆಕ್ಕುಬಂದಿ, ಪೂರ್ವಕ್ಕೆಃ ಸಿ ವಿ ವೆಂಕಟೇಶ್ ರವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆಃ ನಾಗರತ್ನ ಕೋಂ ಸಿ ಕೆ ಕೆಂಪಯ್ಯ ರವರ ಜಮೀನು, ಉತ್ತರಕ್ಕೆಃ ಓಣಿ ರಸ್ತೆ, ದಕ್ಷಿಣಕ್ಕೆ ಚಾಮನಹಳ್ಳಿ ಸ.ನಂ ಗಳ ಆಸ್ತಿಗಳು. ಅದೇ ಜಮೀನಿಗೆ ಸಂಬಂಧಿಸಿದಂತೆ ವಾದಿಯವರು ಮೂಲ ದಾವೆ ಸಂಖ್ಯೆ 91/2010 ನ್ನು ಮದ್ದೂರಿನ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಗುರುಮಲ್ಲಯ, ಸಿ ಎಂ ರಾಮಣ್ಣ, ಸಿ ಆರ್ ವೆಂಕಟೇಶ್ ಗೌಡ ಮತ್ತು ಸಿ ಆರ್ ಸುರೇಶ್ ರವರ ವಿರುದ್ಧ ಒಂದು ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು, ಸದರೀ ದಾವೆ ಶಾಶ್ವತ ನಿರ್ಬಂಧಕಾಜ್ಞೆಗಾಗಿ ಸಲ್ಲಿಸಿದ್ದರು ಎಂದು ಹೇಳುತ್ತಾರೆ. ನೀವು ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದು, ಪಿ ಹೆಚ್ ಡಿ ಪದವಿಯನ್ನೂ ಕೂಡ ತೆಗೆದು ಕೊಂಡಿದ್ದೀರಿ ಎಂದರೆ ಸರಿ. ನಿಮಗೆ ಆಂಗ್ಲ ಭಾಷ್ಷೆ ಅರ್ಥ ಆಗುತ್ತದೆಯೆಂದರೆ ಸರಿ. ಆ ದಾವೆಯಲ್ಲಿ ಈ ಕೇಸಿನ ವಾದಿ ಈ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಹಕ್ಕಿನ ಘೋಷಣೆಗಾಗಿ ಹಾಗೂ ದಿನಾಂಕಃ 07.08.1968 ರ ಎರಡು ಕ್ರಯಪತ್ರಗಳು ತಮಗೆ ಭದ್ದಪಡಿಸುವುದಿಲ್ಲವೆಂದು ತೀರ್ಮಾನಿಸಬೇಕೆಂದು, ಹಾಗೂ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಿರ್ಬಂಧಕಾಜ್ಞೆಯನ್ನು ಕೋರಿ, ದಾವಾ ಸಲ್ಲಿಸಿದ್ದರು ಎಂದರೆ ಸಾಕ್ಷಿ ಇರಬಹುದೆಂದು ನುಡಿಯುತ್ತಾರೆ. ಸದರೀ ದಾವೆಯಲ್ಲಿ ನೀವು 4 ನೇ ಸಾಕ್ಷಿಯಾಗಿ ಸಾಕ್ಷಿ ನುಡಿದಿದ್ದೀರಿ ಎಂದರೆ ಸರಿ. ಸದರೀ ದಾವೆಯನ್ನು ವಿಚಾರಣೆಯನ್ನು ನಡೆಸಿ, ಸ.ನಂ. 24/ಸಿ ರಲ್ಲಿನ ಎರಡು ಕ್ರಯಪತ್ರಗಳು ವಾದಿಯನ್ನು ಬದ್ದಪಸುತ್ತವೆಯೆಂದು ತೀರ್ಮಾನಿಸಿ ದಾವಾ ಆಸ್ತಿಯಲ್ಲಿ ವಾದಿಯವರು ಸ್ವಾಧೀನದಲ್ಲಿ ಇಲ್ಲ ಎಂದು ಪರಿಗಣಿಸಿ ಅವರ ದಾವೆಯನ್ನು ವಜಾಗೊಳಿಸಿರುತ್ತಾರೆಂದರೆ ಸರಿಯಲ್ಲ. ಸದರೀ ದಾವೆ ಏನು ಆಗಿದೆಯೆಂದು ನನಗೆ ಗೊತ್ತಿಲ್ಲ.

ಸದರೀ ದಾವೆಯನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡಿ, ವಜಾಗೊಳಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರೀ ದಾವೆ ವಜಾಗೊಂಡ ನಂತರ ವಾದಿಯವರು ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮದ್ದೂರಿನಲ್ಲಿ ಆರ್ ಎ ನಂ 86/2019 ನ್ನು ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರೀ ಮೇಲ್ಮನವಿಯನ್ನೂ ಕೂಡ ನೀವೇ ಹಾಕಿಸಿರುತ್ತೀರಿ ಎಂದರೆ ಸರಿಯಲ್ಲ. ಸದರೀ ಮೇಲ್ಮನವಿಯಲ್ಲಿ ವಾದಿಯವರು, ವಾದ ಮಂಡನೆಯನ್ನು ಮಾಡುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರೀ ಮೂಲ ದಾವೆ ಸಂಖ್ಯೆ 91/2010 ನ್ನು 28 ವ ರೆ ಗುಂಟೆ ಜಮೀನಿಗಾಗಿ ದಾಖಲು ಮಾಡಿದ್ದು, ಅದು ವಜಾಗೊಂಡ ನಂತರ ಇನ್ನು 10 ಗುಂಟೆ ಜಮೀನನ್ನು ಹೆಚ್ಚುವರಿಯಾಗಿ ಸೇರಿಸಿ, ಈ ನ್ಯಾಯಾಲಯದಲ್ಲಿ ಒಟ್ಟಾರೆಯಾಗಿ 38 ಗುಂಟೆ ಜಮೀನಿಗೆ ಈ ದಾವೆಯನ್ನು ಹಾಕಿಸಿದ್ದೀರಿ ಎಂದರೆ ಸಾಕ್ಷಿ ಇರಬಹುದೆಂದು ನುಡಿಯುತ್ತಾರೆ. ಗುರುಮಲ್ಲಯ್ಯ ರವರು ಈಗ ತೀರಿಕೊಂಡಿದ್ದಾರೆಂದರೆ ಸರಿ. ಸದರೀ ಗುರುಮಲ್ಲಯ್ಯ ರವರನ್ನು ಈ ಪ್ರಸ್ತುತ ಪ್ರಕರಣದಲ್ಲೂ ಕೂಡ ವಾದಿಯವರು 7 ನೇ ಪ್ರತಿವಾದಿಯನ್ನಾಗಿ ಸೇರಿಸಿದ್ದಾರೆಂದರೆ ಸರಿ. ಮೂಲ ದಾವೆ ಸಂಖ್ಯೆ 91/2010 ರಲ್ಲಿ ನಮೂದು ಮಾಡಿರುವ ಸಿ ಎಂ ರಾಮಣ್ಣ ರವರು ಈ ಪ್ರಸ್ತುತ ದಾವೆಯ 11 ನೇ ಪ್ರತಿವಾದಿ ಎಂದರೆ ಸರಿ. ಮೂಲ ದಾವೆ ಸಂಖ್ಯೆ 91/2010 ರಲ್ಲಿನ ಸಿ ಆರ್ ವೆಂಕಟೇಶ್ ಗೌಡ ಮತ್ತು ಸಿ ಆರ್ ಸುರೇಶ್ ರವರು ಈ ಪ್ರಸ್ತುತ ದಾವೆಯಲ್ಲಿನ ಪ್ರತಿವಾದಿ 15 ಮತ್ತು 17 ನೇ ಪ್ರತಿವಾದಿಗಳು ಎಂದರೆ ಸರಿ. ಈ ದಾವೆಯಲ್ಲಿನ ಪ್ರತಿವಾದಿ 15 ರಿಂದ 17 ರವರು ನಿಮ್ಮ ಸಹೋದರರು ಎಂದರೆ ಸರಿ. ಸಿ ಎಂ ರಾಮಣ್ಣ ನನ್ನ ದೊಡ್ಡಪ್ಪನ ಮಗ.

ಮೂಲ ದಾವೆ ಸಂಖ್ಯೆ 91/2010 ರಲ್ಲಿನ ಪರಿಹಾರ ಮತ್ತು ಪ್ರಸ್ತುತ ಪ್ರಕರಣದಲ್ಲಿನ ಪರಿಹಾರ ಒಂದೇ ಆಗಿರುತ್ತದೆಯೆಂದರೆ ಸರಿ. ದಿನಾಂಕಃ 07.08.1968 ರ ಎರಡು ಕ್ರಯಪತ್ರಗಳು ಒಂದು ನನ್ನ ತಂದೆ ಸಿ ಕೆ ರಾಮಣ್ಣ ರವರ ಹೆಸರಿಗೆ ಮತ್ತು ಇನ್ನೊಂದು ಕ್ರಯಪತ್ರ ಸಿ.ಎಂ.ರಾಮಣ್ಣ ರವರ ತಂದೆ ಮಲ್ಲಯ್ಯರವರ ಹೆಸರಿಗೆ ಆಗಿದ್ದ ಕ್ರಯಪತ್ರಗಳು ಎಂದರೆ ನನಗೆ ಗೊತ್ತಿಲ್ಲ. ಮೂಲ ದಾವೆ ಸಂಖ್ಯೆ 91/2010 ರಲ್ಲಿ ಸದರೀ ಕ್ರಯಪತ್ರಗಳು ಆಗಿರುವುದು ನಿಜ, ಆದರೆ ಅವುಗಳನ್ನು ವಾದಿಗಳು ಬದ್ದಪಡಿಸುವುದಿಲ್ಲ ಎಂದು ಸಾಕ್ಷಿ ನುಡಿದಿದ್ದೀರಿ ಎಂದರೆ ಸರಿ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ